ಜೆಎಸ್‌ಎಸ್ ಮಹಾವಿದ್ಯಾಪೀಠ
**ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು**
(ಸ್ವಾಯತ್ತ)
**ಊಟಿ ರಸ್ತೆ, ಮೈಸೂರು – 570 025**
ಪ್ರಚ್ಛನ್ನ ಉತ್ಕೃಷ್ಠತಾ ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ
(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ * ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)
Ph: 0821-2548236 & 2548380. FAX: 0821-2548238 E-mail: jssautonomous@gmail.com Website: JSSCACS.edu.in

ದಿನಾಂಕ 13.10.2023

## ಪ್ರಕಟಣೆಯ ಕೃಪೆಗಾಗಿ

ಸಾಧನೆಗೆ ಯಾವುದೇ ಪರ್ಯಾಯ ಮಾರ್ಗವಿಲ್ಲ, ಶ್ರಮವೊಂದೇ ಮಂತ್ರ
–ಡಾ. ಶ್ರೀದೇವಿ ಅನ್ನಪೂರ್ಣ ಸಿಂಗ್

ಗುರಿ ಇಟ್ಟುಕೊಂಡು ಅಧ್ಯಯನ ಮಾಡಿದರೆ ಸಾಧನೆ ಮಾಡುವುದು ಸುಲಭ. ಆದರೆ ಅದಕ್ಕಾಗಿ ನೀವು ಶ್ರಮಪಡಬೇಕು. ಸಾಧನೆಗೆ ಯಾವುದೇ ಪರ್ಯಾಯ ಮಾರ್ಗವಿಲ್ಲ, ಶ್ರಮವೊಂದೇ ಸಾಧನೆಗೆ ಮಂತ್ರ – ಎಂದು ಸಿ.ಎಫ್.ಟಿ.ಆರ್.ಐ.ನ ನಿರ್ದೇಶಕಿಯಾದ ಡಾ. ಶ್ರೀದೇವಿ ಅನ್ನಪೂರ್ಣ ಸಿಂಗ್ ಅವರು ಹೇಳಿದರು.

ಮೈಸೂರಿನ ಊಟಿರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ದಿನಾಂಕ 13.10.2023 ರಂದು ಏರ್ಪಡಿಸಿದ್ದ ಪದವಿ ವಿದ್ಯಾರ್ಥಿಗಳ ಪ್ರವೇಶ ಕಾರ್ಯಕ್ರಮವಾದ 'ದೀಕ್ಷಾರಂಭ' ದ ಉದ್ಘಾಟನೆಯನ್ನು ನೆರವೇರಿಸಿ ಅವರು "ಈ ಸಂಸ್ಥೆಯಲ್ಲಿ ನಿಮ್ಮ ಜೀವನ ಸವಿನೆನಪಾಗಿರಲಿ. ಇಲ್ಲಿನ ವಿದ್ಯಾಭ್ಯಾಸ ಒಂದು ಮೈಲಿಗಲ್ಲಾಗಬೇಕು. ನೀವು ಯಾವುದೇ ಉದ್ಯೋಗ, ಪದವಿ , ಸ್ನಾತಕೋತ್ತರ ಪದವಿ, ಪಿಎಚ್.ಡಿ ಪದವಿಯನ್ನು ಪಡೆಯಬಹುದು. ಆದರೆ ಅದಕ್ಕೆ ತರಬೇತಿ ಇಲ್ಲಿಂದಲೇ, ಇಂದಿನಿಂದಲೇ ಆರಂಭವಾಗುತ್ತದೆ. ಕೇವಲ ರ‍್ಯಾಂಕ್, ಪ್ರಮಾಣಪತ್ರ, ಪದವಿ ಗಳಿಸುವುದಷ್ಟೇ ಮುಖ್ಯವಲ್ಲ. ಮಾನವೀಯ ಮೌಲ್ಯಗಳು ಮತ್ತು ನೈತಿಕತೆಯನ್ನೂ ಮೈಗೂಡಿಸಿಕೊಳ್ಳಬೇಕು. ನಿಮ್ಮ ಸಾಧನೆ ಮತ್ತು ಪರಿಶ್ರಮವನ್ನು ಸಮಾಜಕ್ಕೆ ಹಿಂದಿರುಗಿಸಬೇಕು. ಮಾಡಬೇಕಾದ ಕೆಲಸವನ್ನು ನಿಸ್ಪೃಹತೆಯಿದ ಮಾಡಿದರೆ ಯಶಸ್ಸು ಸಿಕ್ಕೇ ಸಿಗುತ್ತದೆ. ಜೀವನ ಒಂದು ಸ್ಪರ್ಧೆಯಲ್ಲ, ಅದೊಂದು ಯಾನ. ನೀವು ಪ್ರಯತ್ನವನ್ನು ಬಿಡದೆ ಮಾಡಬೇಕಷ್ಟೆ. ಯಾವುದಾದರು ಹವ್ಯಾಸದೊಂದಿಗೆ ಅಧ್ಯಯನವನ್ನೂ ಮಾಡಿ. ವಿದ್ಯಾಭ್ಯಾಸದ ಜೊತೆಗೆ ವಿದ್ಯಾರ್ಥಿಗಳು ಆರೋಗ್ಯವನ್ನೂ ಗಂಭೀರವಾಗಿ ಪರಿಗಣಿಸಬೇಕು. ಸಮತೋಲನ ಆಹಾರವನ್ನು ತಿನ್ನಬೇಕು. ಇಷ್ಟವೆಂದು ಒಂದೇ ರೀತಿಯ ಆಹಾರವನ್ನು ತಿನ್ನುವುದು ಒಳ್ಳೆಯದಲ್ಲ. ಈ ವಯಸ್ಸಿನಲ್ಲಿ ಪುಷ್ಟಿಯ ಆಹಾರವನ್ನು ಸೇವಿಸಬೇಕು. ಇದರಿಂದ ನಿಮ್ಮ ಆರೋಗ್ಯ-ಆಯಸ್ಸು ವೃದ್ಧಿಸುತ್ತದೆ. ಹಳ್ಳಿಯಿಂದ ಬಂದಿದ್ದೇನೆ ಎಂಬ ಕೀಳರಿಮೆ ಬೇಡ. 100 ಕ್ಕೂ ಮೀರಿದ ಪದಕಗಳನ್ನು ಭಾರತ ಏಷ್ಯಾಡ್ ಗೇಮ್ಸ್‌ನಲ್ಲಿ ಗಳಿಸಿರುವುದನ್ನು ಗಮನಿಸಿ. ಅಲ್ಲಿ ಯಾವುದೋ ಹಳ್ಳಿಗಳಿಂದ ಬಂದ ಸ್ಪರ್ಧಿಗಳಿದ್ದಾರೆ. ಇದನ್ನು ಗಮನದಲ್ಲಿಟ್ಟು ಕೊಂಡು ನಿಮ್ಮ ಅಧ್ಯಯನವನ್ನು ಮುಂದುವರೆಸಿ. ಈ ಕಾಲೇಜಿನಲ್ಲಿ ನಿಮ್ಮ ವಾಸ್ತವ್ಯ ನಿಮಗೆ ಒಳ್ಳೆಯದನ್ನು ನೀಡಲಿ ಎಂದು ಹೇಳಿದರು

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಮುಖ್ಯಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು ಮಾತನಾಡಿ ಮಾಹಿತಿಯ ಪ್ರಕಾರ ಉನ್ನತ ಶಿಕ್ಷಣದಲ್ಲಿ ನಾಲ್ಕು ಕೋಟಿಗೂ ಅಧಿಕ ವಿದ್ಯಾರ್ಥಿಗಳಿದ್ದಾರೆ. ಎಲ್ಲ ವಿದ್ಯಾರ್ಥಿಗಳ ಭಾವನೆ, ಆಸೆಗಳಿಗೆ ತಕ್ಕಂತೆ ವಿದ್ಯಾಭ್ಯಾಸದ ಹಕ್ಕು ಮತ್ತು ಕರ್ತವ್ಯಗಳಿವೆ. 2019 ರಲ್ಲಿ ಯು.ಜಿ.ಸಿ. ಹೊರಡಿಸಿದ ನಿಯಮದ ಪ್ರಕಾರ ಪ್ರಥಮ ಪದವಿ ಮತ್ತು ಸ್ನಾತಕೋತ್ತರ ಪದವಿಯ ವಿದ್ಯಾರ್ಥಿಗಳಿಗೆ ಉತ್ತಮ ಅಡಿಪಾಯವನ್ನು ಹಾಕಿಕೊಡಬೇಕೆಂಬ ಉದ್ದೇಶದಿಂದ ಈ ಬಗೆಯ ಪರಿಚಯಾತ್ಮಕ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ. ಪ್ರಸ್ತುತ ಸಮಾಜದ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು, ಕೌಶಲ್ಯ ಪ್ರಧಾನವಾದ ಶಿಕ್ಷಣಪಡೆಯಲು, ಇಂದಿನ ಸ್ಪರ್ಧಾತ್ಮಕ ಯುಗಕ್ಕೆ ನಿಮ್ಮನ್ನು ಒಡ್ಡಿಕೊಳ್ಳಲು, ಇಲ್ಲಿನ ನಿಮ್ಮ ವಿದ್ಯಾಭ್ಯಾಸ ಪೂರಕವಾಗಿರುತ್ತದೆ. ಅದರ ಸದುಪಯೋಗವನ್ನು ವಿದ್ಯಾರ್ಥಿಗಳು ಮಾಡಿಕೊಳ್ಳಬೇಕು.

'ದೀಕ್ಷಾರಂಭ' ದಿಂದ ಸಾಮಾಜೀಕರಣ, ಸಹವರ್ತನ, ಆಡಳಿತ, ಅನುಭವ. ಇವುಗಳನ್ನು ಅರ್ಥಮಾಡಿಕೊಂಡು ನಡೆದುಕೊಂಡರೆ ವಿದ್ಯಾರ್ಥಿಗಳ ಮತ್ತು ಅಧ್ಯಾಪಕರ ಸಂಬಂಧ ಸೌಹಾರ್ದಯುತವಾಗಿರುತ್ತದೆ. ಇಂದಿನ ಕಾರ್ಯಕ್ರಮದ ಸದುದ್ದೇಶವನ್ನು ಸರಿಯಾಗಿ ಗ್ರಹಿಸಿಕೊಂಡು ಅರ್ಥಪೂರ್ಣವಾಗಿ ಜೀವನದಲ್ಲಿ ಅಳವಡಿಸಿಕೊಳ್ಳಿ ಎಂದು ಹೇಳಿದರು.

ಐಕ್ಯೂಎಸಿ ಸಂಯೋಜನಾಧಿಕಾರಿಗಳಾದ ಡಾ. ಎನ್. ರಾಜೇಂದ್ರಪ್ರಸಾದ್ ಮತ್ತು ಕಾರ್ಯಕ್ರಮದ ಸಂಚಾಲಕರಾದ ಡಾ. ಲೆ. ಎಲ್. ವಿನಯ್ ಕುಮಾರ್ ಅವರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ತೃತೀಯ ಬಿ.ಎಸ್ಸಿ ವಿದ್ಯಾರ್ಥಿನಿ ಕು. ಪೂಜಾ ಹೆಗಡೆ ಪ್ರಾರ್ಥಿಸಿದರು, ಕಾಲೇಜಿನ ಪ್ರಾಂಶುಪಾಲರಾದ ಡಾ. ಎಸ್.ಪ್ರತಿಭಾ ಅವರು ಸ್ವಾಗತಿಸಿದರು, ಡಾ.ಎನ್.ರಾಜೇಂದ್ರಪ್ರಸಾದ್ ವಂದಿಸಿದರು, ಡಾ.ಲೆ.ಎಲ್. ವಿನಯ್ ಕುಮಾರ್ ಅವರು ನಿರೂಪಿಸಿದರು.

ಪ್ರಾಚಾರ್ಯರು

ಗೆ,
ಸಂಪಾದಕರು

..............................................

..............................................

..............................................